ಮೌನಿಯಾದಳು. ಖಾಲಿಕೊಡ ತಾನು ಇಪ್ಪತ್ತೆರಡು ಸಾವಿರದಲ್ಲಿ ಎಷ್ಟು ಉಳಿಸಿದ್ದೇನೆಂದು ಕೇಳಿಕೊಳ್ಳಲಿಕ್ಕೇ ಮುಂದಾಗಲಿಲ್ಲ. ಪ್ರಣತಿಯ ಕೈ ಕೂಡ ಬರಿದಾಗಿತ್ತು. ಆದರೆ, ಮನೆಯಲ್ಲಿ ಕೇಳಿದರೆ ಒಂದಿಷ್ಟು ಹಣ ಹುಟ್ಟಬಹುದು. ಹುಚ್ಚು ಅಂತಂದಾದರೂ ಕೊಡುತ್ತಾರೆ. ಖಾಲಿಕೊಡ ಏನು ಮಾಡಿಕೊಳ್ಳುತ್ತಾನೆ ಎಂದು ಯೋಚಿಸುವಾಗ ದಿಕ್ಕು ತೋಚದಾಯಿತು.

ಖಾಲಿಕೊಡ ಹತಾಶನಾಗಿದ್ದ. ಎಪ್ಪತ್ತು ಸಾವಿರ ಹೊಂದಿಸುವ ಬಗೆ ಹೇಗೆ ಎಂದು ಯೋಚಿಸುವ ಬದಲು 'ನಮ್ಮಿಂದ ಪಾಠ ಹೇಳಿಸಿಕೊಂಡು ಹೊರಗೋದ ಐಕ್ಳೆಲ್ಲ ಎಪ್ಪತ್ತು ಎಂಬತ್ತು ಸಾವಿರ ದುಡೀತಿದಾರೆ. ಕಂಪನಿಗಳಿಗೆ ಕಾಂಗರೂಗಳ ಥರ ಜಿಗೀತಾರೆ. ಈ ನನ್ನ ಮಕ್ಳು ನಮಗೆ ಇಪ್ಪತ್ತೆರಡರಲ್ಲೇ ಇರಿಸವ್ರೆ' ಅಂತಂದು ಉಗಿದ. ಪ್ರಣತಿ ಅವನ ಭುಜವನ್ನು ಮೆದುವಾಗಿ ಒತ್ತಿ ಕಣ್ಣಲ್ಲಿ ಸನ್ನೆ ಮಾಡಿ ಸಂತೈಸಿದ್ದಳು.

5

ನಂತರದಲ್ಲಿ ಖಾಲಿಕೊಡ ಮತ್ತು ಪ್ರಣತಿ ಇಬ್ಬರೂ ಒಂದು ವಾರ ಕಾಲ ಮಾತಾಡಲಿಲ್ಲ. ಪ್ರೇಮವನ್ನು ಕಬಳಿಸುವ ಶಕ್ತಿ ದುಡ್ಡಿಗಿದೆ ಎಂದು ಇಬ್ಬರಿಗೂ ಅರ್ಥವಾಗಿತ್ತು. ಯಾರೊಬ್ಬರೂ ದುಡ್ಡು ಹೊಂದಿಸಿದರೂ ಮತ್ತೊಬ್ಬರ ಬಗ್ಗೆ ಆಳದಲ್ಲಿ ಭಯ. ಅವರು ಹೊಂದಿಸಿರದಿದ್ದರೆ ಮುಂದಡಿ ಇಡುವುದು ಹೇಗೆ? ಜೊತೆ ನಿಂತು ಹೊಂದಿಸೋಣ ಎನ್ನಲೂ ಭಯ.

ವಾರ ಕಳೆದರೂ ಇಬ್ಬರೂ ಪತ್ತೆ ಇಲ್ಲ ಅನಿಸಿದಾಗ ವರದರಾಜಪ್ಪ ಖಾಲಿಕೊಡಕ್ಕೆ ಫೋನ್ ಮಾಡಿ, 'ಸೀಟ್ ಇಲ್ಲದೆ ಒದ್ದಾಡ್ತಿದ್ದಾರೆ ಎಲ್ಲ. ಏನ್ಮಾಡ್ತಿದ್ದೀರಿ ನೀವು?' ಎಂದು ಕೇಳಿದರು. ಖಾಲಿಕೊಡ, 'ಅಡ್ಜಸ್ಟ್ ಆಗ್ತಿದೆ ಸರ್... ತಂದು ಕಟ್ಟುಬಿಡ್ತೀನಿ' ಅಂದಾಗ, 'ಪ್ರಣತಿದು?' ಎಂದು ಕೇಳಿದರು ವರದರಾಜಪ್ಪ. ಖಾಲಿಕೊಡದಲ್ಲಿ ಮಾತು ಬರಿದಾಗಿತ್ತು. ಆದರೂ ಧೈರ್ಯದಲ್ಲಿ 'ಆಕೆದೂ ಸರ್' ಅಂತಂದ. ವರದರಾಜಪ್ಪ 'ಗುಡ್' ಅಂತಂದು ಫೋನ್ ಇಟ್ಟರು.

ಪ್ರಣತಿ ತನ್ನ ಮನೆಯಲ್ಲಿ ಪಿಎಚ್.ಡಿ ಸಲುವಾಗಿ ದುಡ್ಡನ್ನು ಸಂಕೋಚದಲ್ಲಿ ಕೇಳಿದಾಗ, 'ನಿನ್ನ ಫ್ರೆಂಡ್ ದುಡ್ಡನ್ನ ಬ್ಯಾಂಕಲ್ಲಿ ಗುಡ್ಡೆ ಹಾಕ್ತಿದಾಳೆ. ನಿನಗೆ ನಾವೇ ಇನ್ನೂ ಗುಡ್ಡೆ ಹಾಕಬೇಕಾಗಿದೆ' ಅಂದರು ಅಮ್ಮ. ಆಕೆಯ ಅಪ್ಪ, 'ಹೋಗ್ಲಿ ಕೊಡೋಣ ಬಿಡೆ. ಅದೂ ನೋಡೇಬಿಡೋಣ' ಅಂತಂದು ಹಣ ಒದಗಿಸಿಕೊಟ್ಟಿದ್ದರು. ನೋಡೇಬಿಡೋಣ ಅಂತಂದ ಅಪ್ಪನ ಮಾತು ಪ್ರಣತಿಯಲ್ಲಿ ನೆಟ್ಟು ಹೋಗಿತ್ತು. ಹಾಗಂದರೆ ಏನು? ಸಾಹಿತ್ಯಕ ಓದು ಮೊದಲ ಬಾರಿಗೆ ಅವಳ ಕಣ್ಣಲ್ಲಿ ನೀರು ಜಿನುಗುವಂತೆ ಮಾಡಿತ್ತು. ತೀರಾ ಹತ್ತಿರದ ಗೆಳತಿ ಬಳಿ ಪ್ರಣತಿ ಈ ಬಗ್ಗೆ ಮಾತಾಡಿದಾಗ, 'ದುಡೀತಿದ್ಯಲ್ಲೇ... ಅದು ಸಾಲ್ತಿಲ್ವಾ...? ಇಂಥದ್ದಕ್ಕೆಲ್ಲ ಫಂಡಿಂಗ್ ಏಜೆನ್ಸಿಗಳು ಇರ್ತಾವೆ... ಅವುಗಳನ್ನ ಎಡತಾಕಿದ್ರೆ ಫಂಡ್ ಕೊಡ್ತಾವೆ' ಅಂತ ಸಲಹೆ ಕೊಟ್ಟಿದ್ದಳು. ಆ ಏಜೆನ್ಸಿಗಳ ಬಳಿ ಹೋಗಿ ಹಲ್ಲುಗಿಂಜುವುದು ಹೇಗೆ? ಸಾಹಿತ್ಯಕ ಓದು ಹಲ್ಲುಗಿಂಜುವುದನ್ನು ವಿರೋಧಿಸುತ್ತದೆ ಅಲ್ಲವೆ? ಪ್ರಣತಿ ಮನಸ್ಸಿನಲ್ಲಿ ಪ್ರಶ್ನೆಗಳು ಸುಳಿಯುತ್ತಿದ್ದವು.

ಅತ್ತ ಖಾಲಿಕೊಡ ನೋಡುವವರೆಗೂ ನೋಡಿ ಕಡೆಗೆ ಊರಿಗೆ ಹೋಗಿ ಎಮ್ಮೆ ಮಾರಿ ದುಡ್ಡು ಹೊಂದಿಸಿಕೊಂಡು ಬಂದಿದ್ದ. ಈಗ ಇಬ್ಬರ ಕೈಯಲ್ಲೂ ಹಣ ಇತ್ತು. ಆದರೆ, ಯಾರು ಮೊದಲು ಕಾಲ್ ಮಾಡಿ ಮಾತಾಡುವುದು? ಯಾರೊಬ್ಬರ ಬಳಿ ಹಣವಿಲ್ಲದಿದ್ದರೂ ಬದುಕಿನ ಬಂಡಿಯ ಹಳಿ ತಪ್ಪುವುದು ಗ್ಯಾರಂಟಿ ಎಂದು ಗೊತ್ತಿತ್ತು. ಕಡೆಗೆ ಪ್ರಣತಿಯೇ ಫೋನ್ ಮಾಡಿ 'ಏನ್ಕತೆ?' ಅಂದಳು. ಅದು ಪಿಎಚ್.ಡಿಗೂ ಸಂಬಂಧಿಸಿದ್ದಾಗಿರಬೇಕು ಹಾಗೂ ಜನರಲ್ಲಾಗಿ ಕೇಳಿದ ಹಾಗೂ ಇರಬೇಕು. ಖಾಲಿಕೊಡ ನೇರವಾಗಿ ಮತ್ತು ದಿಟ್ಟವಾಗಿ 'ಎಮ್ಮೆ ಮಾರಿ ಹೊಂದಿಸಿದ್ದೀನಿ' ಅಂದ. ಪ್ರಣತಿ ಅಷ್ಟೇ ತಣ್ಣಗೆ 'ನನಗೆ ಅಪ್ಪ ಹೊಂದಿಸಿ ಕೊಟ್ಟರು' ಅಂದಳು.

ಇಬ್ಬರೂ ತಲಾ ಎಪ್ಪತ್ತು ಸಾವಿರ ಹಿಡಿದು ಸೆಂಟರ್‌ಗೆ ಹೋಗಿ ಡಾ. ರಮಾ ಅವರನ್ನ ಭೇಟಿಯಾದರು. ಖುಷಿಗೊಂಡು ಊರಗಲ ಮುಖ ಅರಳಿಸಿ ಮಾತಾಡಿದ ರಮಾ, 'ಇನ್ನು ನಿಮಗೆ ಡಾಕ್ಟರೇಟ್ ಬಂತು ಅಂತಲೇ ತಿಳೀರಿ...' ಅಂತಂದು ಹಣ ಕಟ್ಟುವ ಕೌಂಟರ್ ಬಳಿ ಕಳುಹಿಸಿದರು. ತಂದಿರುವುದೇ ಉಂಟಂತೆ... ಹೋಗಿ ಕಟ್ಟಿಬಿಡೋಣ ಅಂತ ಇಬ್ಬರೂ ಹೋದರು. ಅಲ್ಲಿ ಹಣ ಕಟ್ಟಿಸಿಕೊಳ್ಳುವವನು, 'ಪೂರಾ ಎಪ್ಪತ್ತು ಸಾವಿರಕ್ಕೆ ಬಿಲ್ ಕೊಡೋದಿಲ್ಲ. ನಲ್ವತ್ತು ಸಾವಿರಕ್ಕೆ ಮಾತ್ರ ಕೊಡ್ತೀವಿ. ಇನ್ನು ಹತ್ತು ಸಾವಿರ ಕಾಲೇಜಿಗೆ. ಉಳಿದ ಇಪ್ಪತ್ತು ಸಾವಿರ ಡಾ. ರಮಾ ಅವರಿಗೆ ಕೊಟ್ಟುಬಿಡಿ. ಅದು ಗೈಡ್